ಇರುತ್ತದೆ. ಆದ್ದರಿಂದ ೫೮ ವರ್ಷವಾದರೆ ೫೮ ವರ್ಷ ಅಂತ ಹೇಳಿ, ೫೯ ವರ್ಷವಾದರೆ ೫೯ ಅಂತ ಹೇಳಿ. ಈ ಬಗ್ಗೆ ಯಾವುದಾದರೂ ಒಂದು ಸ್ಪಷ್ಟವಾದ ನೀತಿ ಇರಬೇಕು.

ಅಧ್ಯಕ್ಷರು.— ತಾವು ೫ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸುತ್ತೀರಾ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ನಾನು ಇನ್ನು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.— ಹಾಗಾದರೆ ೨ನೇ ತಾರೀಖಿನ ದಿವಸ ಪ್ರಾರಂಭಿಸಿ.

ಅಧ್ಯಕ್ಷರು.— ಈ ದಿನ ಮಧ್ಯಾಹ್ನ ೩–೦೦ ಗಂಟೆಗೆ ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ಈ ಕೆಳಕಂಡ ತೀರ್ಮಾನವನ್ನು ತೆಗೆದುಕೊಂಡಿತು.

೨–೪–೧೯೯೦ ಬೆಳಿಗ್ಗೆ ೧೧ ಗಂಟೆಗೆ ಶಾಸನ ರಚನಾ ಕಾರ್ಯಕಲಾಪಗಳು, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಚರ್ಚೆಯನ್ನು ಮುಂದುವರಿಸುವುದು.

೩–೪–೧೯೯೦ ಬೆಳಿಗ್ಗೆ ೯ ಗಂಟೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರಿಸುವುದು.

೪–೪–೧೯೯೦ ಬೆಳಿಗ್ಗೆ ೯–೦೦ ಗಂಟೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಂವ ಬಗ್ಗೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, "ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಈ ಸದನವು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ" ಈ ನಿರ್ಣಯವನ್ನು ಮಂಡಿಸುತ್ತಾ ಇದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಲಿಕ್ಕೆ ತಮ್ಮ ಅಪ್ಪಣೆಯನ್ನು ಪಡೆಯುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಿರಂತರವಾಗಿ ಕರ್ನಾಟಕ ರಾಜ್ಯದಲ್ಲಿ ನಿಸರ್ಗ ಸಂಪತ್ತಿನ ನಾಶ ಸುದೀರ್ಘವಾಗಿ ನಡೆಯುತ್ತಿದೆ. ಈ ನಾಶವನ್ನು ತಪ್ಪಿಸುವ ಬಗ್ಗೆ ಸರ್ಕಾರ ಯಾವುದೇ ರೀತಿಯಾದಂಥ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕನ್ನಡ ನಾಡು ನಿಸರ್ಗದಲ್ಲಿ ಇಡೀ ದೇಶದಲ್ಲಿಯೇ ಅತ್ಯಂತ ರಮಣೀಯವಾದಂಥ ನಾಡು. ಗಂಧದ ಗುಡಿ, ಚಿನ್ನದ ನಾಡು, ಸುಂದರವಾದಂಥ ಪ್ರದೇಶ, ಯಾವ ಜಿಲ್ಲೆಯನ್ನು ನೋಡಿದರೂ ಅಷ್ಟೊಂದು ಸುಮಧುರವಾದಂಥ, ಭವ್ಯವಾದಂಥ ಒಂದು ಪ್ರದೇಶವನ್ನು ಹೊಂದಿರತಕ್ಕಂಥ ಈ ನಾಡಿನಲ್ಲಿ ನಿಸರ್ಗದ ನಾಶ, ಬಹುಶಃ ಯಾವುದೇ ರಾಜ್ಯದಲ್ಲಿ ಇಷ್ಟೊಂದು ಮಟ್ಟದಲ್ಲಿ ಇಷ್ಟೊಂದು ಪರಿಣಾಮಕಾರಿಯಾಗಿ ನಡೆದಿಲ್ಲ ಎಂಬುದನ್ನು ನಾನು ಕಣ್ಣಾರೆ ಅನೇಕ ಕಡೆ ಹೋಗಿ ನೋಡಿದ್ದೇನೆ. ತಾವು ಅನೇಕ ಸಾರಿ ಧಾರ್ಮಿಕ ಸ್ಥಳವಾದಂಥ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ತಾವು ಹೋಗುತ್ತಿರುವುದು ಗೊತ್ತಿದೆ. ನಾನೂ ಸಹ ಹೋಗುತ್ತಿದ್ದೇನೆ. ಇಂತಹ ಅನೇಕ ಧಾರ್ಮಿಕ ಸ್ಥಳಗಳು ಈ ನಿಸರ್ಗದ ರಮಣೀಯತೆಯನ್ನು ಕಳೆದುಕೊಂಡು ಒಂದು ರೀತಿಯ ಬರಡಾಗಿದೆ. ೭ ಮಲೆ, ೨೭ ಮಲೆ, ಮಹದೇಶ್ವರನಿಗೆ ಉಫ್, ಎನ್ನುತಕ್ಕಂತಾದ್ದು ಮೊದಲಿನಿಂದ ಒಂದು ಪದ್ಧತಿ, ಈ ೭ ಮಲೆ, ೨೭ ಮಲೆ ದಾಟಿ ಮುಂದೆ ಸಿಕ್ಕತಕ್ಕದ್ದು ಮಹದೇಶ್ವರ ದೇವಸ್ಥಾನ. ಅಷ್ಟೊಂದು ಪವಿತ್ರವಾದಂಥ, ರಮಣೀಯವಾದಂಥ ನಿಸರ್ಗ ಸಂಪತ್ತನ್ನು ಹೊಂದಿರತಕ್ಕಂಥದ್ದು ಈ ಒಂದು ಧಾರ್ಮಿಕ ಸ್ಥಳ. ಎಲ್ಲಿ ೭ ಮಲೆ ಇದೆ, ಎಲ್ಲಿ ೨೭ ಮಲೆ ಇದೆ, ಅನೇಕ ಕಡೆ ಈ ಗ್ರಾನೈಟ್ ಲೂಟಿ ಮಾಡುವ ಒಂದು ಗಂತ್ತಿಗೆದಾರರು ಇಡೀ ನಿಸರ್ಗವನ್ನೇ ನಾಶಮಾಡಿ ಗ್ರಾನೈಟ್ ಕಲ್ಲುಗಳನ್ನು ತೆಗೆದು ವಿದೇಶಗಳಿಗೆ ಸುಮಾರಾಗಿ ೧೮ ರಾಷ್ಟ್ರಗಳಿಗೆ ಮಾಡತಕ್ಕಂಥಾದ್ದು, ಹತ್ತಾರು ವರ್ಷಗಳಿಂದ ನಡೆದು ಬಂದಿದೆ. ಅಧ್ಯಕ್ಷರೆ, ತಮಗೆ ಹೇಳುವುದಾದರೆ, ಈ ಒಂದು ಲೂಟಿಗೆ, ಹಗಲು ದರೋಡೆಗೆ ನಿಸರ್ಗ ಸಂಪತ್ತಿನ ನಾಶಕ್ಕೆ ಅನೇಕ ಧಾರ್ಮಿಕ ಸ್ಥಳಗಳು ಇದಕ್ಕೆ ಬಲಿಯಾಗಿವೆ. ಮಲೆ, ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಪವಿತ್ರವಾದಂಥ ಶಿವಗಂಗೆ ಬೆಟ್ಟ, ರಾವಂದೇವರ ಗುಡ್ಡ, ಮುಗ್ಗಲಮರಿ ಬಸವೇಶ್ವರ ದೇವಸ್ಥಾನ ಹೀಗೆ

ಅನೇಕ ಧಾರ್ಮಿಕ ಸ್ಥಳಗಳನ್ನು ಲೂಟಿ ಮಾಡಿದ್ದಾರೆ. ತಾವು ದಯಮಾಡಿ ಈ ಸಭೆಯನ್ನು ಮುಂದೂಡಿದಾಗ ದಯಮಾಡಿ ಶಿವಗಂಗೆ ಬೆಟ್ಟಕ್ಕೆ ತಾವು ಹೋಗಬೇಕು. ಕೆಳಗಡೆ ತಾವು ಹತ್ತುವಾಗ ತಮಗೆ ಗೊತ್ತಾಗುತ್ತದೆ, ಇಡೀ ಶಿವಗಂಗೆ ಬೆಟ್ಟವನ್ನು ಲೂಟಿ ಮಾಡಿದ್ದಾರೆ. ಅದನ್ನು ತಾವು ನೋಡಬಹುದು. ತಾವು ಮೇಲಕ್ಕೆ ಪೂಜೆಗೆ ಹೋದಾಗ ಅಲ್ಲಿ ಹೇಳುತ್ತಾರೆ, ಸಿಡಿಮದ್ದಿನ ಶಬ್ದದಿಂದ ಲಿಂಗ ಅದುರುತ್ತದೆ ಎನ್ನುವುದನ್ನು ಅಲ್ಲಿ ಪೂಜೆ ಮಾಡತಕ್ಕ ಪೂಜಾರಿಗಳು ಹೇಳುತ್ತಾರೆ. ಇವತ್ತು ಎಲ್ಲಾ ಕಡೆ ಇದೇ ರೀತಿ ನಡೆಯುತ್ತಿದೆ. ಎಲ್ಲಾ ಕಡೆ ಇರುವ ದೇವಸ್ಥಾನಗಳ ಹತ್ತಿರ ಈ ರೀತಿ ಲೂಟಿ ಮಾಡುತ್ತಿದ್ದಾರೆ. ಹಣದ ಸಂಪಾದನೆಗೋಸ್ಕರ ಕೆಲವು ಗುತ್ತೇದಾರರು ಈ ಕಲ್ಲುಗಳನ್ನು ಲೂಟಿ ಮಾಡಿ ನಾಶ ಮಾಡುತ್ತಿದ್ದಾರೆ. ಇದನ್ನು ರಾಜಕಾರಣಿಗಳಾದವರೂ ಕೂಡ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ನಿಸರ್ಗ ಪ್ರೇಮಿಗಳು ಶಿಲ್ಪದ ಬಗ್ಗೆ ಅತ್ಯಂತ ಪ್ರೇಮ ವಿಶ್ವಾಸ ಇಟ್ಟುಕೊಂಡಿರತಕ್ಕಂತಹ ರಾಜಕಾರಣಿಗಳು ನಮ್ಮ ರಾಜ್ಯದಲ್ಲಿ ವಿರಳ. ಇವತ್ತು ವಿಧಾನಸೌಧ ಕಟ್ಟಿದಂತಹ ವಾಸ್ತುಶಿಲ್ಪಿ ಕೆಂಗಲ್ ಹನುಮಂತಯ್ಯನವರನ್ನು ನಾವು ನೆನೆಸಿಕೊಳ್ಳಬೇಕು. ಹೆಜ್ಜೆ ಹೆಜ್ಜೆಗೂ ಈ ನಾಡಿನ ಸೌಂದರ್ಯದ ನಿರ್ಗದ ಬಗ್ಗೆ, ಈ ದೇಶದ ಭವಿಷ್ಯತ್ತಿನ ಬಗ್ಗೆ, ಈ ನಾಡಿನ ಭವ್ಯ ಪರಂಪರೆಯ ಬಗ್ಗೆ, ಈ ನಾಡಿನ ಅಭಿವೃದ್ಧಿಯ ಬಗ್ಗೆ ಹಗಲೂ ರಾತ್ರಿ ಚಿಂತನೆ ಮಾಡುತ್ತಿದ್ದರು. ಅಂತಹ ಧೀಮಂತ ಮಹಾ ವ್ಯಕ್ತಿಯಾಗಿದ್ದ ಅವರು ಇದ್ದಿದ್ದರೆ ಈ ದಿನ ಅವರಣಾಂತ ಉಪವಾಸ ಕೂತುಕೊಳ್ಳುತ್ತಿದ್ದರು. ನಮ್ಮ ನಾಡಿನ ನಿಸರ್ಗ ಸಂಪತ್ತು ನಾಶವಾಗುತ್ತಾ ಇಗುವುದನ್ನು ತಪ್ಪಿಸುವುದಕ್ಕೋಸ್ಕರ ಕಲ್ಲು ಬಂಡೆಯಂತೆ ಮುಂದೆ ನಿಲ್ಲುತ್ತಿದ್ದರು. ನಮ್ಮ ರಾಜ್ಯದಲ್ಲಿ ಇವತ್ತು ಈ ರೀತಿ ನಿಸರ್ಗ ಸಂಪತ್ತನ್ನು ನಾಶ ಮಾಡುವುದು ನಿರಂತರವಾಗಿ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಯಾರೂ ಸಹ ಚಿಂತನೆ ಮಾಡಿಲ್ಲ. ಕರ್ನಾಟಕ ರಾಜ್ಯದ ಅನೇಕ ಗಣಿಗಳಲ್ಲಿ ಅಂದರೆ ಸುಮಾರು ೧,೦೦೦ ಗಣಿಗಳಲ್ಲಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿದ್ದಾರೆ. ಆದರೆ ಸರಕಾರದ ಲೆಕ್ಕಕ್ಕೆ ಅಂದರೆ ಭೂ ಗಣಿ ವಿಜ್ಞಾನ ಇಲಾಖೆಯ ಲೆಕ್ಕಕ್ಕೆ ಬಂದಿರುವಂಥಾದ್ದು ಸುಮಾರು ೯೯ ಅಥವಾ ನೂರು ಗಣಿಗಳು ಮಾತ್ರ. ನಾನೇ ಸುಮಾರು ೨೦೦ ಗಣಿಗಳನ್ನು ನೋಡಿದ್ದೇನೆ. ನಾನೇ ವೈಯಕ್ತಿಕವಾಗಿ ಹೋಗಿ ಅನೇಕ ಗಣಿಗಳ ಚಿತ್ರವನ್ನು ತೆಗೆದು ಪತ್ರಿಕೆಗಳ ಮೂಲಕ ಪ್ರಕಟ ಪಡಿಸಿದ್ದೇನೆ. ಸುಮಾರು ಎರಡೂವರೆ ವರ್ಷದಿಂದ ನಿಸರ್ಗ ಸಂಪತ್ತಿನ ನಾಶ ಅಂದರೆ ಗ್ರಾನೈಟ್ ಕಲ್ಲಿನ ಲೂಟಿ ತಪ್ಪಬೇಕೆಂದು ನಾನು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸಗಳನ್ನು ಮಾಡಿದರೂ ಕೂಡ ಇದನ್ನು ತಡೆಯಲು ಸಾಧ್ಯವಾಗಲಿಲ್ಲ. ಈ ಬಗ್ಗೆ ಅನೇಕ ರೀತಿಯ ಹೋರಾಟಗಳನ್ನು ಮಾಡಿದೆ. ಪತ್ರಕರ್ತರನ್ನು ಕರೆದುಕೊಂಡು ಬಂದು ಅವರಿಗೂ ಕೂಡ ತೋರಿಸಿದೆ. ಇದನ್ನು ನಿಲ್ಲಿಸಲು ಬಗ್ಗೆ ಯಾವ ಸರಕಾರವೂ ಕೂಡ ಪರಿಣಾಮಕಾರಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಈ ಗ್ರಾನೈಟ್ ಕಲ್ಲುಗಳನ್ನು ತೆಗೆಯುವಂತಹ ಗುತ್ತೇದಾರರು ಯಾರಿದ್ದಾರೆ ಅವರು ಅತ್ಯಂತ ಬಹಳ ಪ್ರಭಾವಿತವಾದಂತಹ ವ್ಯಕ್ತಿಗಳು. ಕೋಟಿ ಕೋಟಿ ಹಣವನ್ನು ಲೂಟಿ ಮಾಡಿದ್ದಾರೆ. ಸಮಗ್ರವಾಗಿ ಒಂದು ಸಮರ್ಥವಾದ ನ್ಯಾಯಾಂಗ ತನಿಖೆಯನ್ನು ನಡೆಸುವುದಾದರೆ ಯಾವ ಪ್ರಮಾಣದಲ್ಲಿ ನಿಸರ್ಗ ಸಂಪತ್ತು ನಾಶವಾಗಿದೆ. ನಮ್ಮಲ್ಲಿನ ಶಿಲ್ಪಗಳು, ಗ್ರಾನೈಟ್‌ಗಳು ಎಷ್ಟು ವಿದೇಶಕ್ಕೆ ಹೋಗಿವೆ, ಏನು ಪರಿಸ್ಥಿತಿ ಬಂದಿದೆ ಎಂದರೆ ಬಹುಶಃ ನಮ್ಮ ದೇಶದಲ್ಲಿ ಇಂತಹ ಹಗಲು ದರೋಡೆ ಎಲ್ಲೂ ನಡೆದಿಲ್ಲ ಎಂಬ ತೀರ್ಪು ಹೊರಕ್ಕೆ ಬರುತ್ತದೆಂದು ನಾನು ನಂಬಿಕೊಂಡಿದ್ದೇನೆ. ಇದನ್ನು ತಪ್ಪಿಸುವುದಕ್ಕೆ ಯಾವ ಅಧಿಕಾರಿಗಳೂ ಕೂಡ ಪ್ರಯತ್ನ ಪಡಲಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೆಸರಿಗೆ ಮಾತ್ರ ಇದೆ ಈ ಇಲಾಖೆಯು ತೆರೆ ಮರೆಯಲ್ಲಿ ಅಧಿಕಾರಿ ವರ್ಗವೇ ಗುತ್ತೇದಾರರಿಗೆ ಬೆಂಬಲವಾಗಿ ನಿಂತಿದ್ದಾರೆ. ತಾವು ಬೇಕಾದರೆ ಮಂಗಳೂರಿಗೆ ಪ್ರವಾಸ ಹೋದಾಗ ಬಂದರು ಕಡೆ ಹಗಲು ಅಥವಾ ಸಂಜೆಯಲ್ಲಿ ಸ್ವಲ್ಪ ಕಣ್ಣು ಹಾಯಿಸಿ ನೋಡಬೇಕು. ಅಲ್ಲಿ ಒಂದು ಹೊಸ ಪರ್ವತವೇ ಸೃಷ್ಟಿಯಾಗಿದೆ. ಇದು ಹತ್ತಾರು ವರ್ಷಗಳಿಂದ ನಡೆಯುತ್ತಿದೆ. ಇದು ಎಷ್ಟು ದೊಡ್ಡದಾಗಿ ನಡೆದಿದೆ ಎಂಬುದನ್ನು ವಿಚಾರ ಮಾಡಬೇಕು. ವಿವಿಧ ಬಣ್ಣ ಬಣ್ಣದ ಕಲ್ಲುಗಳು ದೊಡ್ಡ ದೊಡ್ಡ ಕಲ್ಲುಗಳು ಅನೇಕ ಚದುರಡಿಯ ಕಲ್ಲುಗಳು ರಾಶಿ ರಾಶಿ ಕಲ್ಲು ಬಂಡೆಗಳು ಅಲ್ಲಿ ಬಂದು ಬಿದ್ದಿದೆ.

ಶ್ರೀ ಬಿ. ಎಂ. ಇದಿನಬ್ಬ.— ೫—೬ ಎಕರೆ ಭೂಮಿಯಲ್ಲಿ ಕಲ್ಲುಗಳು ಕಾಣುತ್ತದೆ. ಅದು ಎಲ್ಲಿಂದ ಬಂತು ಎಂಬುದು ನಮಗೂ ಗೊತ್ತಿಲ್ಲ. ನಾವೂ ಅದನ್ನು ನೋಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.— ನನ್ನ ಪ್ರಕಾರ ೨೫ ಎಕರೆ ಪ್ರದೇಶದಲ್ಲಿ ಅಲ್ಲಿ ಕಲ್ಲು ಬಿದ್ದಿದೆ. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಪ್ರತಿ ದಿನ ಹಡಗಿನಲ್ಲಿ ಆ ಕಲ್ಲುಗಳನ್ನು ವಿದೇಶಕ್ಕೆ ಸಾಗಿಸತಕ್ಕಂಥಾದ್ದು ನಡೆಯುತ್ತಿದೆ. ಬೇರೆ ಕಡೆಯಿಂದ ಲಾರಿಯಲ್ಲಿ ಮಂಗಳೂರಿಗೆ ತೆಗೆದುಕೊಂಡು ಆ ಬಂದರಿನಲ್ಲಿ ಇಳಿಸುವುದು ಮತ್ತು ಅದನ್ನು ಹಡಗಿಗೆ ಸಾಗಿಸತಕ್ಕಂಥಾದ್ದು ನಿರಂತರವಾಗಿ ನಡೆಯುತ್ತಿದೆ.

ಅಲ್ಲಿ ಎಷ್ಟು ಮೌಲ್ಯದ ಕಲ್ಲು ಇದೆ ಎಂಬುದನ್ನು ನಾನು ಹೇಳುತ್ತೇನೆ. ಬೇಕಾದರೆ ನಾಳೆ ಯಾರಾದರೂ ತನಿಖೆ ನಡೆಸಲಿ. ೧ ಸಾವಿರ ಕೋಟಿ ರೂಪಾಯಿಯ ಕಲ್ಲು ಅಲ್ಲಿ ಇದೆ. ೨೫ ಎಕರೆ ಪ್ರದೇಶದಲ್ಲಿ ಕಲ್ಲಿನ ಮೇಲೆ ಕಲ್ಲು ಕಲ್ಲಿನ ಮೇಲೆ ಕಲ್ಲು ಬಿದ್ದಿವೆ. ಒಂದು ಕಲ್ಲಿನ ಬೆಲೆ ಜಪಾನ್ ದೇಶದ ಲೆಕ್ಕದಲ್ಲಿ ೨೫ ಸಾವಿರ ರೂಪಾಯಿಗಳು. ಆ ಕಲ್ಲನ್ನು ತೆಗೆಯುವುದಕ್ಕೆ ೩ ಸಾವಿರ ರೂಪಾಯಿಗಳ ಖರ್ಚು ಬೀಳುತ್ತದೆ. ಗಣಿಯಿಂದ ಕಲ್ಲನ್ನು ತೆಗೆದು ಲಾರಿಗೆ ಹಾಕಿ ಅದನ್ನು ಮಂಗಳೂರಿಗೆ ಬಂದರಿಗೆ ಸಾಗಿಸುವ ಹೊತ್ತಿಗೆ ಈ ಕಲ್ಲಿಗೆ ಕೇವಲ ೩ ಸಾವಿರ ರೂಪಾಯಿ ಖರ್ಚು ತಗಲುತ್ತದೆ. ಆದರೆ ಇವರಿಗೆ ೨೫ ಸಾವಿರ ರೂಪಾಯಿ ಸಿಕ್ಕುತ್ತದೆ. ಈ ರೀತಿ ಸುಮಾರು ೪೦ ಸಾವಿರ ಕೋಟಿ ರೂಪಾಯಿಗಳ ಕಲ್ಲುಗಳನ್ನು ಇವರು ಮಾರಾಟ ಮಾಡಿದ್ದಾರೆಂದು ನಾನು ಸರ್ಕಾರಕ್ಕೆ ತಪ್ಪು ಮಾಹಿತಿ ಗಾರರಿಂದ ತಿಳಿದು ಹೇಳುತ್ತಿದ್ದೇನೆ. ವಾಟಾಳ್ ನಾಗರಾಜ್‌ರವರು ಹೇಳಿದಷ್ಟು ಅಂಕಿ ಅಂಶಗಳು ಸರಿಯಲ್ಲ ನಮ್ಮ ಹತ್ತಿರ ಅಂಕಿಅಂಶಗಳಿವೆ ಎಂದು ಸರ್ಕಾರದವರು ಇವತ್ತಿನವರೆಗೂ ಹೇಳಿಲ್ಲ. ಇದುವರೆಗೆ ಸುಮಾರು ೪—೫ ಜನ ಮುಖ್ಯ ಮಂತ್ರಿಗಳು ಬಂದು ಹೋದರು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಕೂಡ ಅನೇಕ ಮಂತ್ರಿಗಳು ಬಂದು ಹೋದರು. ಅವರೆಲ್ಲರೂ ಕೂಡ ಈ ವಿಚಾರದಲ್ಲಿ ತನಿಖೆ ಮಾಡಿಸುತ್ತೇನೆಂದು ಹೇಳುತ್ತಲೇ ಬಂದರು. ಮೊದಮೊದಲು ಅವರು ಹಾಗೆ ಹೇಳುತ್ತಾರೆ. ಆದರೆ ಬರಬರುತ್ತಾ ಅವರು ಹೇಗಾಗುತ್ತಾರೆಂದರೆ ಈ ಕಲ್ಲಿನ ಗುತ್ತಿಗೆದಾರರೂ ಮತ್ತು ಈ ಮಂತ್ರಿಗಳೂ ಬಹಳ ನಿಕಟ ಸಂಬಂಧವನ್ನು ಇಟ್ಟುಕೊಳ್ಳುತ್ತಾರೆ. ಪರಸ್ಪರ ಔತಣ ಕೂಟಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ಅವರು ಬಂದು ಬಾಗಿಲಲ್ಲಿ ಕಾದುಕೊಂಡು ನಿಂತುಕೊಳ್ಳುತ್ತಾರೆ. ಮತ್ತೆ ನಾವು ಕೇಳಿದರೆ ಯಾರೂ ಕೂಡ ಇದರ ತನಿಖೆಯ ಬಗ್ಗೆ ಮಾತನಾಡುವುದಕ್ಕೇ ಹೋಗುವುದಿಲ್ಲ. ಈ ರೀತಿಯ ಸಾಗಾಣಿಕೆಯನ್ನು ತಡೆಗಟ್ಟಬೇಕೆಂಬ ಮನಸ್ಸುಳ್ಳ ಅಧಿಕಾರಿಗಳು ನಮ್ಮಲ್ಲಿ ಇಲ್ಲವೆಂದಲ್ಲ. ನನ್ನ ಜೊತೆಯಲ್ಲಿ ಧ್ವನಿಗೂಡಿಸಿದಂಥ ಒಬ್ಬ ಐ.ಎ.ಎಸ್ ಅಧಿಕಾರಿ ಮದನಗೋಪಾಲ್ ಎನ್ನುವವರು ಬಹಳ ಶ್ರಮಿಸಿದರು. ಅವರು ಪ್ರಾಮಾಣಿಕರಾದಂಥ ದಕ್ಷ ಅಧಿಕಾರಿ ಆಗಿದ್ದರು ಅವರ ಅಧೀನದಲ್ಲಿದ್ದಂಥ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ಈ ಮೂರು ತಾಲೂಕುಗಳಲ್ಲೇ ಅಲ್ಲದೆ ಇನ್ನೂ ೧೨—೧೩ ಜಿಲ್ಲೆಗಳಲ್ಲಿ ಈ ಗ್ರಾನೈಟ್ ಕಲ್ಲುಗಳನ್ನು ತೆಗೆದು ಸಾಗಿಸತಕ್ಕ ಕೆಲಸ ನಿರಂತರವಾಗಿ ಇವತ್ತೂ ಕೂಡ ನಡೆಯುತ್ತಲೇ ಇದೆ. ಇದರ ಬಗ್ಗೆ ನಾನು ಹೇಳಿದಂಥ ಐ.ಎ.ಎಸ್. ಅಧಿಕಾರಿ ಮದನಗೋಪಾಲ್ ಯಾರಿದ್ದಾರೆ ಅವರು ಬೃಹತ್ ತನಿಖೆಯನ್ನು ನಡೆಸಿ ವರದಿಗಳ ಮೇಲೆ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟರು. ಅಂತಿಮವಾಗಿ ಈ ಐ. ಎ. ಎಸ್. ಅಧಿಕಾರಿಗೆ ದೊರಕಿದ್ದು ಎಂದರೆ ಬೇರೆ ಕಡೆಗೆ ಟ್ರಾನ್ಸ್‌ಫರ್. ಆ ಗುತ್ತಿಗೆದಾರ ವ್ಯಕ್ತಿ ಯಾರಿದ್ದಾನೆ ಅವನು ಯಳಂದೂರು ತಾಲ್ಲೂಕು ಆಫೀಸಿನಲ್ಲಿ ಸತ್ಯಕ್ಕೆ ದೂರವಾದ ಒಂದು ಪ್ರಮಾಣ ಪತ್ರವನ್ನು ಕೊಟ್ಟು ನಾನು ಈ ಪ್ರದೇಶದಲ್ಲಿ ವ್ಯವಸಾಯ ಮಾಡುವುದಕ್ಕೆ ಬಂದಿರತಕ್ಕವನು ಎಂದು ಹೇಳಿಕೆಯನ್ನು ಕೊಟ್ಟು ಸರ್ಕಾರಕ್ಕೆ ಮೋಸಮಾಡಿ ಆ ಜಮೀನಿನಲ್ಲಿ ವ್ಯವಸಾಯ ಮಾಡದೆ ಅಲ್ಲಿಂದ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಕಲ್ಲನ್ನು ತೆಗೆಸಿ ಮಾರಾಟ ಮಾಡಿದ್ದಾನೆ. ನಂತರ ಈ ವ್ಯಕ್ತಿಯು ಸತ್ಯಕ್ಕೆ ದೂರವಾದ ಪ್ರಮಾಣ ಪತ್ರವನ್ನು ಕೊಟ್ಟು ಸರ್ಕಾರಕ್ಕೆ ಮೋಸಮಾಡಿದ್ದಾನೆ, ಇವನ ಬಗ್ಗೆ ಕೇಸು ದಾಖಲು ಮಾಡಿಕೊಳ್ಳಬೇಕೆಂದು ಮದನಗೋಪಾಲ್‌ರವರು ಅದೇ ಯಳಂದೂರು ಪೋಲೀಸ್ ಸ್ಟೇಷನ್‌ಗೆ ದೂರನ್ನು ಕೊಟ್ಟರು ಇದೆಲ್ಲಾ ಆದಮೇಲೆ ನಾನು ಆಗಲೇ ಹೇಳಿದಂತೆ ಆ ಐ ಎ ಎಸ್. ಅಧಿಕಾರಿಗೆ ಸಿಕ್ಕಿದ ಬಹುಮಾನ ಎಂದರೆ ಬೇರೆ ಊರಿಗೆ ಟ್ರಾನ್ಸ್‌ಫರ್. ಆ ಗುತ್ತಿಗೆದಾರ ವ್ಯಕ್ತಿಯಮೇಲೆ ಪೋಲೀಸರು ''ಬಿ'' ರಿಪೋರ್ಟ್ ಹಾಕಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖೇನ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಕೂಲಂಕಷ ತನಿಖೆಯಾದ ಸಮಗ್ರ ವರದಿಗಳೂ ಈ ಸದನದ ಮುಂದೆ ಬರಬೇಕು. ''ಬಿ'' ರಿಪೋರ್ಟನ್ನು, ಯಾವ ಆಧಾರದ ಮೇಲೆ ಪೋಲೀಸಿನವರು ಯಾವ ರೀತಿ ಹಾಕಿದರು ಎಂಬುದೂ ಸಹ ನಮಗೆ ತಿಳಿಯಬೇಕು. ಇದಕ್ಕೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನೂ ಇಲ್ಲಿ ಮಂಡಿಸಬೇಕು. ಹೆಚ್ಚು ವಿದೇಶದ ಹಣ ಸಿಕ್ಕುತ್ತದೆಂದು ನಮ್ಮ ಮನೆಯ ಮಕ್ಕಳನ್ನು ವಿದೇಶೀಯರಿಗೆ ಮಾರಾಟ ಮಾಡಿಕೊಳ್ಳತಕ್ಕ ಮಟ್ಟಕ್ಕೆ ನಾವು ಹೋಗಬಾರದು. ಯಾವ ದೇಶದಲ್ಲಿಯೂ ಕೂಡ ಹಣಕ್ಕಾಗಿ ಈ ರೀತಿ ಶಿಲೆಗಳನ್ನು ಮಾರಿಕೊಳ್ಳತಕ್ಕ ಪ್ರವೃತ್ತಿ ಇದೆಯೆಂದು ನಾನು ಕೇಳಿಲ್ಲ. ವಿಗ್ರಹಗಳನ್ನ ಕದ್ದರೆ ಅದು ಅಪರಾಧವಾಗುತ್ತದೆಂದು ಕಾನೂನು ಇರತಕ್ಕದ್ದು ನನಗೆ ಗೊತ್ತಿದೆ. ಆದರೆ ಇದು ವಿಗ್ರಹ ಅಲ್ಲ ಎಂದು ಯಾರಾದರೂ ಹೇಳಬಹುದು. ಆದ್ದರಿಂದ ನಾನು ಹೇಳುತ್ತಿದ್ದೇನೆ. ಇದು ವಿಗ್ರಹವಲ್ಲದಿದ್ದರೂ ವಿಗ್ರಹಗಳನ್ನು ಮಾಡತಕ್ಕ ಸುಂದರ ಶಿಲೆಗಳು ಎಂಬುದನ್ನು ಯಾರೂ ಮರೆಯಬಾರದು.

ಈ ತಿಲಿಗಳನ್ನು ಲೆಕ್ಕವಿಲ್ಲದಷ್ಟು ಹಗಲು ದರೋಡೆ ಮಾಡುತ್ತಿರುತ್ತಾರೆ. ಒಬ್ಬರಮೇಲಾದರೂ ಈ ಗುತ್ತಿಗೆದಾರರಮೇಲೆ ಏನಾದರೂ ಕ್ರಮ ತೆಗೆದುಕೊಂಡಿರುತ್ತೀರಾ ? ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದಿರತಕ್ಕಂಥ ಒಂದು ದಾಖಲೆಯಾದರು ಸರ್ಕಾರದಲ್ಲಿ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ತಾವು ಅಧಿಕಾರಕ್ಕೆ ಬಂದು ಮೂರು ತಿಂಗಳಾಯಿತು. ಇಂಥವರ ಬಗ್ಗೆ ಕರೆದು ಏನು ಕ್ರಮ ತೆಗೆದುಕೊಂಡಿರುತ್ತೀರಿ. ಮಂತ್ರಿಗಳ ಕಾರ್ಯಾಲಯದ ಮುಂದೆ ಯಾರಾರು ಯಾರು ಬಂದು ನಿಂತಿರುತ್ತಾರೆಂದು ನಾನು ಎಚ್ಚರದಿಂದ ನೋಡುತ್ತಿದ್ದೇನೆ. ಈ ಗುತ್ತಿಗೆದಾರರು ಲೈನಾಗಿ ನಿಂತಿರುತ್ತಾರೆ.

ಅಧ್ಯಕ್ಷರು.— ಮುಂದಿನ ಖಾಸಗಿ ಕಾರ್ಯಕಲಾಪಗಳ ದಿವಸ ತಾವು ತಮ್ಮ ಚರ್ಚೆಯನ್ನು ಮುಂದುವರೆಸಬಹುದು. ಈಗ ಸಭೆಯು ಮುಂದುವರಿದಂ ಏಪ್ರಿಲ್ ೨ನೇ ತಾರೀಖು ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

ಸದನವು ೬-೦೨ ನಿಮಿಷಕ್ಕೆ ಮುಂಕ್ಕಾಯಂವಾಗಿ ಸೋಮವಾರ ದಿನಾಂಕ ೨ನೇ ಏಪ್ರಿಲ್ ೧೯೯೦ ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.